**<u>ಸಾಕ್ಷಿಯನ್ನು ಪ್ರಮಾಣ ವಚನ ಬೋಧಿಸಲಾದ ದಿನಾಂಕಃ 26-09-2023</u>**

**<u>ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಶ್ರೀ.ವಿ ಜಿ ಜಿ ವಕೀಲರಿಂದಃ</u>**

ನನ್ನ ಮುಖ್ಯ ವಿಚಾರಣೆಯಲ್ಲಿ ಹೇಳಿರುವ ವಿಚಾರಗಳು ನನಗೆ ಗೋತ್ತಿದ್ದು, ಅವುಗಳು ಸತ್ಯವಾಗಿವೆ ಮತ್ತು ಅದರಲ್ಲಿರುವ ಸಹಿ ನನ್ನದೆ ಆಗಿರುತ್ತದೆ.

**<u>ಪಾಟೀ ಸವಾಲುಃ 1 3 ಮತ್ತು 4 ನೇ ಎದುರುದಾರರ ಪರ ಶ್ರೀ.ಎಮ್ ಎಮ್ ಎಸ್ ವಕೀಲರಿಂದಃ</u>**

ನಾನು ಬೆಂಗಳೂರಿನಲ್ಲಿ ಸುಮಾರು 4 ವರ್ಷ ಅಂದರೆ 2015 ರಿಂದ 2020 ರ ವರೆಗೆ ವಾಸ ಇದ್ದೆ. ನಾನು ಎರಡು ಬೆಂಗಳೂರಿನಲ್ಲಿ ಕೆಲಸ ಮಾಡಿದ್ದೆ. ನಾನು ಅರುಣ, ಪ್ರಸಾದ ಮತ್ತು ಸಂಧೀಪ ರವರ ಬಳಿ ಕೆಲಸ ಮಾಡುತ್ತಿದ್ದೆ ಅವರುಗಳು ಇಂಜಿನೀಯರಗಳು ಆಗಿದ್ದರು. ಸದರಿ ಅರುಣ, ಪ್ರಸಾದ ಮತ್ತು ಸಂದೀಪ ರವರ ಬಳಿ 8 ಜನರು ಕೆಲಸ ಮಾಡುತ್ತಿದ್ದರು ನನ್ನ ತಮ್ಮ ಸಹ ಅಲ್ಲಿ ಕೆಲಸ ಮಾಡುತ್ತಿದ್ದ. ನನ್ನ ಮೃತ ತಮ್ಮ ಸುಮಾರು ಒಂದುವರೆ ಎರಡು ವರ್ಷ ಅಲ್ಲಿ ಕೆಲಸ ಮಾಡಿದ್ದಾರೆ. ನಾನು ಬೆಂಗಳೂರಿನ ಠಾಣೆಯಲ್ಲಿ ಅಪಘಾತದ ಕುರಿತು ದೂರು ಕೊಟ್ಟಿದ್ದೆನೆ. ನಾನು ಹೇಳಿದಂತೆ ನಿಪಿ.2 ದೂರಿನಲ್ಲಿ ಬರೆಯಲಾಗಿದೆ. ದೂರಿನಲ್ಲಿ ನಾನು ಮತ್ತು ನಮ್ಮ ತಮ್ಮ ಎರಡು ತಿಂಗಳಿನಿಂದ ಗಾರೆ ಕೆಲಸ ಮಾಡುತ್ತಿದ್ದೆವು ಎಂದು ಬರೆಸಿದ್ದೆವು ಎಂದರೆ ಸರಿಯಲ್ಲ. ನಾನು ಎರಡು ತಿಂಗಳಿನಿಂದ ಕೆಲಸ ಮಾಡುತ್ತಿದ್ದೆ ಎಂದು ನಿಪಿ.2 ದೂರಿನಲ್ಲಿ ಬರೆದಿರುವ ವಿಚಾರ ನಿಜ ಇದೆ. ಸಾಕ್ಷಿಯು ಮುಂದುವರೆದು ಎರಡು ತಿಂಗಳ ಮುಂಚೆಯು ಸಹ ಅವರ ಬಳಿ ಕೆಲಸ ಮಾಡತ್ತಿದ್ದೆವು. ನಡುವೆ ನಮ್ಮ ತಾಯಿಗೆ ಆರಾಮ ಇಲ್ಲದ ಕಾರಣ ಊರಿಗೆ ಬಂದು ಪುನಃ ಅವರ ಬಳಿ ಹೋಗಿ ಕೆಲಸ ಮಾಡಿದ್ದೆವು ಆದ್ದರಿಂದ ಬರೆಸಿದ್ದೆನೆ ಎಂದು ಹೇಳುತ್ತಾರೆ. ನಾನು ಮತ್ತು ನನ್ನ ತಮ್ಮ ಎರಡು ವರ್ಷದಿಂದ ಸದರಿರವರ ಬಳಿ ಕೆಲಸ ಮಾಡುತ್ತಿದ್ದೆವು ಎಂದು ತೋರಿಸಲು ದಾಖಲೆ ಹಾಜರು ಮಾಡಿಲ್ಲ ಸಾಕ್ಷಿಯು ದಾಖಲೆ ಅವರು ಕೊಟ್ಟಿಲ್ಲ ಎಂದು ಹೇಳುತ್ತಾರೆ. ನಮಗೆ ನಮ್ಮ ದುಡಿಮೆಯ

ವೇತನ ವನ್ನು ದಿನಕ್ಕೆ ರೂ.450 ರಂತೆ ಪ್ರತಿ ಶನಿವಾರ ಕೂಲಿ ಹಣವನ್ನು ನಗದುರೂಪದಲ್ಲಿ ಕೊಡಲಾಗುತ್ತಿತ್ತು.

2. ನನ್ನ ಮೃತ ತಮ್ಮ ಅಪಘಾತದ ಎರಡು ವರ್ಷಗಳ ಹಿಂದೆ ಬೆಂಗಳೂರಿಗೆ ಕೆಲಸಕ್ಕೆ ಬಂದಿದ್ದರು. ನಾನು ಮತ್ತು ನನ್ನ ತಮ್ಮ ಸುಮಾರು ಎರಡು ವರ್ಷ ಸದರಿ ಇಂಜೀನಿಯರಗಳ ಕಡೆ ಬೇರೆ ಬೇರೆ ಕಟ್ಟಡ ಕೆಲಸ ಮಾಡಿದ್ದೆವೆ. ಅಪಘಾತವಾದ ಕಟ್ಟಡ ಮುಸ್ತಫಾ ರವರಿಗೆ ಸೇರಿದ್ದು ಹಾಗೂ ಸದರಿ ಕಟ್ಟಡದ ಕೆಲಸವನ್ನು ಅರುಣ ಹಾಗೂ ಪ್ರಸಾದ ಇಂಜೀನಿಯರಗಳು ಮಾಡುತ್ತಿದ್ದರು. ಇಂಜೀನಿಯರಗಳು ಕಟ್ಟಡದ ಕೆಲಸ ನಕಾಶೆಯಂತೆ ಆಗುತ್ತದೆ ಅಥವಾ ಇಲ್ಲ ಎಂದು ನೋಡುವ ಕೆಲಸ ಎಂದರೆ ನಿಜ. ಸಾಕ್ಷಿಯು ಅವರೆ ನಮ್ಮನ್ನು ಕೆಲಸಕ್ಕೆ ಇಟ್ಟು ಪಗಾರ ಕೊಡುತ್ತಿದ್ದರು ಎಂದು ಹೇಳುತ್ತಾರೆ.

3. ಅಪಘಾತವಾದ ಕಟ್ಟಡ ಮೂರು ಮಹಡಿ ಕಟ್ಟಡವಾಗಿತ್ತು. ನಾವು ಪ್ರತಿ ದಿನ ಬೆಳಿಗ್ಗೆ 8.30 ರಿಂದ ಕೆಲಸ ಮಾಡುತ್ತಿದ್ದೆವು. ನಾವು ಗಾರೆ ಕೆಲಸವನ್ನು ಮಾಡುತ್ತಿದ್ದೆವು. ಕಟ್ಟಡದ ಮಹಡಿಗಳು ಸುಮಾರು 10 ಅಡಿಗಳ ಅಂತರದಲ್ಲಿ ಇರುತ್ತವೆ. ನನ್ನ ತಮ್ಮ ಮೂರನೆ ಮಹಡಿಯಲ್ಲಿ ಅಪಘಾತದ ದಿನ ಕೆಲಸ ಮಾಡುವಾಗ ನಾನು ಎರಡನೇ ಮಹಡಿಯಲ್ಲಿ ಕೆಲಸ ಮಾಡುತ್ತಿದ್ದೆ. ನಾವು ಆ ದಿನ ಗಾರೆ ಕೆಲಸ ಮಾಡುತ್ತಿದ್ದವು. ನನ್ನ ಮೃತ ತಮ್ಮ ಕಟ್ಟಡದ ಹೊರಗಡೆ ಭಾಗದಲ್ಲಿ ಗಾರೆ ಕೆಲಸ ಮಾಡುತ್ತಿದ್ದರು. ಗಾರೆ ಕೆಲಸ ಮಾಡಲು ಸಜ್ಜಾವನ್ನು ಹಾಕಿಕೊಂಡು ಅದರ ಮೇಲೆ ನಿಂತು ಮಾಡುತ್ತಿದ್ದರು. ಸಜ್ಜಾದಿಂದ ಕೇಳಗೆ ಬಿದ್ದರೆ ನೆಲಕ್ಕೆ ಬಿಳ್ಳುತ್ತಾರೆ ಎಂದರೆ ನಿಜ. ನನ್ನ ತಮ್ಮ 5-6 ಅಡಿಗಳು ಕೆಳಗೆ ಬಿದ್ದ ನಂತರ ಮೆಟ್ಟಿಲುಗಳಿಂದ ಜಾರಿ ಬಿದ್ದನು. ನಾನು ಸದರಿ ಘಟನೆ ಕಣ್ಣಾರೆ ನೋಡಿಲ್ಲ. ಕಟ್ಟಡದ ಒಳಗಡೆ ಮಾತ್ರ ಮೆಟ್ಟಿಲುಗಳು ಇರುತ್ತವೆ ಎಂದರೆ ಸಾಕ್ಷಿಯು ಕಟ್ಟಡದ

ಹೊರಗಡೆ ಸಹ ಮೆಟ್ಟಲು ಇದ್ದವು ಎಂದು ಹೇಳುತ್ತಾರೆ. ನನ್ನ ಅಳಿಯ ಘಟನೆಯನ್ನು ಕಣ್ಣಾರೆ ನೋಡಿದ್ದಾರೆ. ನನ್ನ ತಮ್ಮನಿಗೆ ಅವರು ಕೆಳಗೆ ಬಿದ್ದನಂತರ ಅವರಿಗೆ ಮೈ ಕೈಗೆ ಗಾಯಗಳು ಆದ್ದವು. ನನ್ನ ತಮ್ಮನಿಗೆ ಕಿವಿಯಿಂದ ರಕ್ತ ಬಂದಿತ್ತು. ಹಣೆಗೆ, ದವಡೆಗೆ, ಸೊಂಟಕ್ಕೆ ಹಾಗೂ ಕಾಲುಗಳಿಗೆ ಗಾಯಗಳು ಆಗಿದ್ದವು. ನನ್ನ ತಮ್ಮನ ಕಾಲುಗಳು ಮುರಿದಿದ್ದವು. ಸ್ಥಳಕ್ಕೆ ಸಂಧೀಪ ಮತ್ತು ಕುಮಾರ ಅನ್ನುವ ಇಂಜೇನಿಯರಗಳು ಬಂದಿದ್ದರು. ನನ್ನ ತಮ್ಮನ ವೈದ್ಯಕೀಯ ಖರ್ಚು ಇಂಜೇನಿಯರ ಭರಿಸಿದ್ದಾರೆ ಎಂದರೆ ಸರಿಯಲ್ಲ ಸಾಕ್ಷಿಯು 10 ಸಾವಿರ ರೂಪಾಯಿ ಖರ್ಚಿಗೆ ಕೊಟ್ಟಿದ್ದರು ಎಂದು ಹೇಳುತ್ತಾರೆ. ಆಸ್ಪತ್ರೆಯಲ್ಲಿ ನನ್ನ ತಮ್ಮ ಸುಮಾರು 1 ತಿಂಗಳು ಭರ್ತಿ ಇದ್ದರು. ಆಸ್ಪತ್ರೆಯ ಒಟ್ಟು ಖರ್ಚು ಎಷ್ಟು ಆಗಿದೆ ಎಂದು ಹೇಳಲು ಬರುವುದಿಲ್ಲ. ನನ್ನ ತಮ್ಮ ಭರ್ತಿ ಆಗಿದ್ದ Baptist ಆಸ್ಪತ್ರೆ ಹೆಸರುವಾಸಿ ಎಂದರೆ ನಿಜ. ಅಲ್ಲಿ ನಮ್ಮ ತಮ್ಮ ಭರ್ತಿ ಆಗಿದ್ದು ಸುಮಾರು 2-3 ಲಕ್ಷ ಖರ್ಚು ಆಗಿರಬಹುದು ಎಂದರೆ ನಿಜ. ಆಸ್ಪತ್ರೆಯ ಬಿಲ್ಲನ್ನು ಇಂಜೇನಿಯರಗಳು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ನಾನು ಕೊಟ್ಟಿದ್ದೆನೆ. ಎಷ್ಟು ಕೊಟ್ಟಿದ್ದೆನೆ ಎಂದರೆ ನೆನಪಿಲ್ಲ. ಆಸ್ಪತ್ರೆಯ ಖರ್ಚು ಇಂಜೇಯರಗಳು ಕೊಟ್ಟಿದ್ದರು ಸಹ ನಾನು ಕೊಟ್ಟಿದ್ದೆನೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೆನೆ ಎಂದರೆ ಸರಿಯಲ್ಲ. ಆಸ್ಪತ್ರೆಯ ಖರ್ಚಿನ ಬಿಲ್ಲುಗಳು ನಮ್ಮ ತಾಯಿಯ ಬಳಿ ಇವೆ. ನಮ್ಮ ತಾಯಿ ಸದರಿ ಔಷಧಿಚೀಟಿಗಳನ್ನು ಎಲ್ಲಿ ಇಟ್ಟಿದ್ದಾರೆ ಗೊತ್ತಿಲ್ಲ. ನಾನು ಸುಮಾರು 3 ಲಕ್ಷ ಹಣವನ್ನು ಆಸ್ಪತ್ರೆ ಖರ್ಚಿಗೆ ಕೊಟ್ಟಿದ್ದೆನೆ. ನನ್ನ ಬಳಿ ಹಣ ಪಾವತಿಸಿದ ಬಿಲ್ಲುಗಳು ಇಲ್ಲ. ನಾನು ಮತ್ತು ನನ್ನ ಕುಟುಂಬ ಬೆಂಗಳೂರಿನಲ್ಲಿ ವಾಸ ಇದ್ದೆವು. ನನಗೆ ಎರಡು ಗಂಡು ಹಾಗೂ ಒಂದು ಹೆಣ್ಣು ಮಕ್ಕಳು ಇವೆ. ನನ್ನ ಜೊತೆಯಲ್ಲಿ ನನ್ನ ಮಕ್ಕಳು ಸಹ ಕೆಲಸ ಮಾಡುತ್ತಿದ್ದರು. ನನ್ನ ಮಕ್ಕಳ ವಯಸ್ಸು 22 ಮತ್ತು 23 ಇತ್ತು.

4. ನನ್ನ ಮೃತ ತಮ್ಮ ಎಚ್.ಐ.ವಿ ರೋಗದಿಂದ ಬಳಲುತ್ತಿದ್ದರು ಎಂದರೆ ಸರಿಯಲ್ಲ. ನನ್ನ ತಮ್ಮನಿಗೆ ಅವರ ಹೆಂಡತಿ ಮಕ್ಕಳು ಸೇರಿಸಿಕೊಳ್ಳುತ್ತಿರಲಿಲ್ಲ ಎಂದರೆ ಸಾಕ್ಷಿಯು ಕೇವಲ ಜಗಳ ಆಗಿತ್ತು ಆದ್ದರಿಂದ ನನ್ನ ಬಳಿ ಇದ್ದರು ಎಂದು ಹೇಳುತ್ತಾರೆ. ನನ್ನ ತಮ್ಮನ ಹೆಂಡತಿ ಮಕ್ಕಳು ಬೈಲಹೊಂಗಲ ಗ್ರಾಮದಲ್ಲಿ ಇರುತ್ತಾರೆ. ಈ ಅರ್ಜಿಯನ್ನು ನಮ್ಮ ತಾಯಿ ಹಾಕಿದ್ದಾರೆ ಎಂದರೆ ನಿಜ. ನನ್ನ ಮೃತ ತಮ್ಮ ಬೆಂಗಳೂರಿಗೆ ನನ್ನ ಬಳಿ ಖರ್ಚಿಗೆ ಹಣವನ್ನು ತೆಗೆದುಕೊಂಡು ಹೋಗಲು ಹಾಗೂ ನನ್ನನ್ನು ಮಾತನಾಡಿಸಲು ಬಂದಿದ್ದರು ಎಂದರೆ ಸರಿಯಲ್ಲ. ನನ್ನ ತಮ್ಮ ನನ್ನನ್ನು ಮಾತನಾಡಿಸಲು ನಾನು ಕೆಲಸ ಮಾಡುವ ಜಾಗಕ್ಕೆ ಬಂದಿದ್ದರು ಅಲ್ಲಿ ತಲೆ ತಿರುಗಿ ಬಿದ್ದರು, ನಂತರ ನನ್ನ ಇಂಜೀನೀಯರಗಳು ನಾನು ಅವರ ಬಳಿ ಕೆಲಸ ಮಾಡುತ್ತಿದ್ದೆ ಎಂದು ಅನುಕಂಪದ ಮೇರೆಗೆ ಅವನಿಗೆ ಚಿಕಿತ್ಸೆಕೊಡಿಸಿದ್ದರು ಎಂದರೆ ಸರಿಯಲ್ಲ. Baptist ಆಸ್ಪತ್ರೆಯಲ್ಲಿ ನಮ್ಮ ತಮ್ಮನ ಖಾಯಿಲೆ ನಿವಾರಣೆ ಆಗುವುದಿಲ್ಲ ಸರ್ಕಾರಿ ಆಸ್ಪತ್ರೆಯಲ್ಲಿ ಸೇರಿಸಿ ಎಂದು ಹೇಳಿದ್ದರಿಂದ ಅವರಿಗೆ ಸರ್ಕಾರಿ ಆಸ್ಪತ್ರೆಯಲ್ಲಿ ಸೇರಿಸಲಾಗಿತ್ತು ಎಂದರೆ ನಿಜ. ನನ್ನ ತಮ್ಮ ಬೆಳಗಾವಿಯ ಜಿಲ್ಲಾ ಆಸ್ಪತ್ರೆಯಲ್ಲಿ ಸೇರಿಸಲಾಗಿತ್ತು ಎಂದರೆ ನಿಜ. ಅಲ್ಲಿ ಅವನಿಗೆ ಆರೋಗ್ಯ ಸುಧಾರಿಸಲು ಆಗುವುದಿಲ್ಲ ಎಂದು ಹೇಳಿದ್ದರಿಂದ ಮನೆಗೆ ಕರೆದುಕೊಂಡು ಹೋಗಲಾಗಿತ್ತು ನಂತರ ಪುನಃ ಅವರಿಗೆ ಆರೋಗ್ಯ ಸರಿ ಇಲ್ಲದೆ ಇರುವುದು ಕಂಡಾಗ ಪುನಃ ಬೆಳಗಾವಿಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಲಾಯಿತು ಆಗ ಅಲ್ಲಿ ಅವರು ತೀರಿಕೊಂಡರು ಎಂದರೆ ನಿಜ. ನನ್ನ ತಮ್ಮನ ಶವಪರೀಕ್ಷೆ ಬೆಳಗಾವಿಯ ಸರ್ಕಾರಿ ಆಸ್ಪತ್ರೆಯಲ್ಲಿ ಆಗಿದೆ. ಶವ ಪರೀಕ್ಷೆಯಲ್ಲಿ ನನ್ನ ಮೃತ ತಮ್ಮನಿಗೆ ಗಾಯಗಳು ಇರಲಿಲ್ಲ ಎಂದು ಬರೆಯಲಾಗಿದೆ ಎಂದರೆ ಸರಿಯಲ್ಲ. ಶವ ಪರೀಕ್ಷೆಯಲ್ಲಿ ನನ್ನ ತಮ್ಮ ಯಾವ ಕಾರಣಕ್ಕೆ ಮೃತಪಟ್ಟಿದ್ದಾರೆ ಎಂದು ಬರೆದಿಲ್ಲ ಎಂದರೆ ಸರಿಯಲ್ಲ. ನನ್ನ ತಮ್ಮ ಕಾಯಿಲೆಯಿಂದ ಮೃತ ಪಟ್ಟಿದ್ದರು ಆದರು ನನ್ನ ಬಳಿ ಮಾತನಾಡಿಸಲು ಬಂದಾಗ ತಲೆ ಚಕ್ರ ಬಂದು ಬಿದ್ದುದ್ದರಿಂದ ಅದರ ದುರುಪಯೋಗಪಡೆದುಕೊಂಡು ಅವರು ಕೆಲಸದ ಮೇಲೆ ಇದ್ದಾಗ ಬಿದ್ದು ನಂತರ

ತೀರಿಕೊಂಡಿದ್ದಾರೆ ಎಂದು ಸುಳ್ಳು ಹೇಳಿ ಸುಳ್ಳು ಅರ್ಜಿ ಸಲ್ಲಿಸಿ ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ತಮ್ಮ ಬಿದ್ದ ನಂತರ ಅದೆ ದಿನ ದೂರು ದಾಖಲು ಮಾಡಲು ಆಗಲಿಲ್ಲ ನನ್ನ ತಮ್ಮನಿಗೆ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದೆ ಹಾಗೂ ಅವರ ಜೊತೆಯಲ್ಲಿ ಆಸ್ಪತ್ರೆಯಲ್ಲಿ ಇದ್ದೆನು. ನಂತರ ನಾನು ದೂರು ದಾಖಲು ಮಾಡಿದ್ದೇನೆ. ನಾನು ಎದುರದಾರರಿಂದ ಹಣವನ್ನು ಪಡೆಯಲು ಹೊಂಚು ಮಾಡಿ, ಪ್ಲಾನ ಮಾಡಿಕೊಂಡು ಸುಳ್ಳು ದೂರು ದಾಖಲು ಮಾಡಿದ್ದೇನೆ ಎಂದರೆ ಸರಿಯಲ್ಲ. ನನ್ನ ಮೃತ ತಮ್ಮ ಎದುರದಾರರ ಹತ್ತಿರ ಎಂದಿಗೂ ಕೆಲಸ ಮಾಡುತ್ತಿರಲಿಲ್ಲ ಅವನು ಕೆಲಸದ ಸಮಯದಲ್ಲಿ ಬಿದ್ದು, ನಂತರ ತೀರಿಕೊಂಡಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ನಮ್ಮ ತಾಯಿ ಮೂಲಕ ಸುಳ್ಳು ಅರ್ಜಿಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

(ಈ ಮೇಲಿನ ಸಾಕ್ಷ್ಯವನ್ನು ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಆಧರಿಸಿ ನಾನು ಹೇಳಿದಂತೆ ಬೆರಳಚ್ಚು ಮಾಡಲಾಯಿತು.)

**ಓ.ಹೇ.ಕೇ. ಸರಿ ಅದೆ.**

**ಹಿರಿಯ ದಿವಾಣಿ ಮತ್ತು ಜೆಎಂಎಫಸಿ ನ್ಯಾಯಾಧೀಶರು,**
**ಖಾನಾಪೂರ.**